**ಪ್ರಧಾನ ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ.ಸಿ. ನಂಬರ ಃ 2456/2025**

ಪಿರ್ಯಾದುದಾರರು : ಶ್ರೀ ಎಮ್.ಜಿ.ಎಮ್. ಸೌಹಾರ್ಧ ಕ್ರೆಡಿಟ್ ಕೊ-ಆಪರೇಟಿವ್ ಲಿ.
ಸರ್ಪನಕಟ್ಟೆ ಶಾಖೆಃ ಚೌಥನಿ

**ವಿರುದ್ಧ**

ಆರೋಪಿ : ಶ್ರೀ ಹುಮಾಯನ ಬಾಷಾ ಸಾಬ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಮೇರೆಗೆ ಆರೋಪಿತನ ಹೇಳಿಕೆ**

ಪ್ರಶ್ನೆ 1 : ಈ ಪ್ರಕರಣದಲ್ಲಿನ ಪಿರ್ಯಾದಿದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ಕೇಳಿದ್ದೀರಾ?

ಉತ್ತರ : **Yes**

ಪ್ರಶ್ನೆ 2 ಫ್ರಾ.ಸಾ.1 ಶ್ರೀ ಲೊಕೇಶ ತಂದೆ ರಮೇಶ ನಾಯ್ಕ ಇವರು ತಮ್ಮ ಸಾಕ್ಷಿಯಲ್ಲಿ ಹೇಳಿರುವುದೇನೆಂದರೆ, ಶ್ರೀಮತಿ ಸೀಮಾಬಾನು ಮುಜೀನುಲ್ಲಾ ರವರು ಪಿರ್ಯಾದಿ ಸಂಸ್ಥೆಯಿಂದ ದಿನಾಂಕಃ 25-05-2023 ರಂದು ರೂ.1,00,000/- ವೈಯಕ್ತಿಕ ಸಾಲ ಪಡೆದುಕೊಂಡಿದ್ದು, ಸದ್ರಿ ಸಾಲಕ್ಕೆ ನೀವು ಜಾಮೀನುದಾರರಾಗಿದ್ದು, ನೀವು ಮತ್ತು ಸಾಲಗಾರರು ನಿಗಧಿತ ಅವಧಿಯೊಳಗೆ ಸಾಲವನ್ನು ಪಿರ್ಯಾದಿ ಸಂಸ್ಥೆಗೆ ಮರುಪಾವತಿಸಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : **False**

ಪ್ರಶ್ನೆ 3 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದ್ರಿ ಸಾಲದ ಮರುಪಾವತಿಗಾಗಿ, ನೀವು ಕರ್ನಾಟಕ ಬ್ಯಾಂಕ ಭಟ್ಕಳ ಶಾಖೆ ಚೆಕ್ ನಂಬರ್ 555151ನ್ನು ರೂ.1,22,681/-ಕ್ಕೆ ದಿನಾಂಕಃ 24-06-2025 ಎಂದು ನಮೂದಿಸಿ ಚೆಕ್‌ನ್ನು ಪಿರ್ಯಾದಿ ಸೊಸೈಟಿಗೆ ನೀಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : **False**

ಪ್ರಶ್ನೆ 4 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದ್ರಿ ಚೆಕ್ಕನ್ನು ಫೆಡ್‌ರಲ್ ಬ್ಯಾಂಕ, ಭಟ್ಕಳ ಶಾಖೆಯಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ, "Drawers signature differs" ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು, ದಿನಾಂಕಃ 25-06-2025 ರಂದು ವಾಪಾಸ್ಸು ಬಂದಿರುತ್ತದೆ ಎಂದು ಈ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು

ಹೇಳುತ್ತೀರಿ?

ಉತ್ತರ : **False**

ಪ್ರಶ್ನೆ 5 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಚೆಕ್ ಅಮಾನ್ಯಗೊಂಡ ಕಾರಣದಿಂದ ದಿನಾಂಕಃ 09-07-2025 ರಂದು ಪಿರ್ಯಾದಿ ಸೊಸೈಟಿ ಯವರು ತಮ್ಮ ವಕೀಲರ ಮೂಲಕ ನಿಮಗೆ ನೋಟಿಸ್ ನೀಡಿದ್ದು, ಸದರಿ ನೋಟಿಸ್‌ನ್ನು ಪಡೆಯಲು ನೀವು ನಿರಾಕರಿಸಿದ ಕಾರಣ Unclaimed ಎಂದು ದಿನಾಂಕಃ 26-07-2025 ರಂದು ವಾಪಾಸ್ಸು ಬಂದಿರುತ್ತದೆ. ಆದರೂ ನೀವು ಸದ್ರಿ ನೋಟಿಸಿಗೆ ಉತ್ತರವನ್ನಾಗಲಿ ಅಥವಾ ಹಣವನ್ನು ಮರುಪಾವತಿಸಿದ್ದಾಗಲಿ ಇರುವುದಿಲ್ಲ, ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರೂ ಸಹ ಚೆಕ್‌ನ್ನು ನೀಡಿ ಅಪರಾಧವೆಸಗಿರುತ್ತೀರಿ ಎಂದು ಈ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : **False**

ಪ್ರಶ್ನೆ 6 ನಿಮಗೆ ಹೇಳಲು ಇನ್ನೇನಾದರೂ ಇದೆಯಾ?

ಉತ್ತರ : **No**

ಪ್ರಶ್ನೆ 7 ನಿಮ್ಮ ಪರವಾಗಿ ಸಾಕ್ಷಿ ಇದೆಯಾ?

ಉತ್ತರ : **Yes**

(ಈ ಮೇಲಿನ ಆರೋಪಿಯ ಎಲ್ಲಾ ಹೇಳಿಕೆಗಳನ್ನು ನನ್ನ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿದ್ದು, ಆತ ಹೇಳಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿರುತ್ತದೆ.)

**Sd/-**

**(ಶ್ರೀಮತಿ.ದೀಪಾ ಅರಳಗುಂಡಿ)**

ಪ್ರಧಾನ ಸಿವಿಲ್ ಜಡ್ಜ ಮತ್ತು

ದಿನಾಂಕಃ 16/05/2026 ಪ್ರ. ದ. ನ್ಯಾಯಿಕ ದಂಡಾಧಿಕಾರಿ, ಭಟ್ಕಳ.